(ಇ) ಗ್ರಾಮೀಣ ಪ್ರದೇಶದಲ್ಲಿ ಕೃಷಿಯೇತರ ಚಟುವಟಿಕೆಗಳಿಗಾಗಿ ರೈತರು ತಮ್ಮ ಜಮೀನನ್ನ ಉಪಯೋಗಿಸಿಕೊಳ್ಳಲು ನಗರ ಯೋಜನಾ ಇಲಾಖೆಯವರು ಹೊಸ ಕರಾರು ವಿಧಿಸಿರುವುದರ ಬಗ್ಗೆ.

ಶ್ರೀ ಯು.ಬಿ.ಬಣಕಾರ್ (ಹಿರೇಕೆರೂರು): ಮಾನ್ಯ ಸಭಾಧ್ಯಕ್ಷರೇ, ತಾವೂ ಸಹ ಗ್ರಾಮೀಣ ಪ್ರದೇಶದಿಂದ ಬಂದಿರತಕ್ಕಂಥವರು. ಗ್ರಾಮೀಣ ಪ್ರದೇಶಗಳಲ್ಲಿ ಕೃಷಿಯೇತರ ಚಟುವಟಿಕೆಗಳಿಗಾಗಿ ರೈತರು ತಮ್ಮ ಜಮೀನನ್ನು ಉಪಯೋಗಿಸಿಕೊಳ್ಳಬೇಕಾದರೆ ನಗರ ಯೋಜನಾ ಇಲಾಖೆಯವರು ಅವರಿಂದ ಮಂಜೂರಾತಿಯನ್ನು ಪಡೆಯಬೇಕೆಂದು ಒಂದು ಹೊಸ ಆದೇಶವನ್ನು ಕೊಟ್ಟಿದ್ದಾರೆ. ಇದರಿಂದ ರೈತರಿಗೆ ಬಹಳಷ್ಟು ತೊಂದರೆಯಾಗುತ್ತಿದೆ. ನಗರ ಯೋಜನಾ ಇಲಾಖೆಯವರು ಅಳವಡಿಸಿರುವ ಈ ಕರಾರನ್ನು ರದ್ದು ಮಾಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತಿದ್ದೇನೆ.

ಶ್ರೀ ಎಂ.ಸಿ.ನಾಣಯ್ಯ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು): ಇದು ಅರ್ಬನ್ ಡೆವೆಲಪ್‌ಮೆಂಟ್ ಅಥಾರಿಟಿಯೊಳಗೆ ಬರುವಂಥಾದ್ದು. ಅರ್ಬನ್ ಡೆವಲಪ್‌ಮೆಂಟ್ ಅಥಾರಿಟಿಯೊಳಗೆ ಬಂದಮೇಲೆ ಆ ಪ್ರದೇಶದಲ್ಲಿ ಎಲ್ಲೆಲ್ಲಿ ರೆಸಿಡೆನ್ಷಿಯಲ್ ಏರಿಯಾ, ಇಂಡಸ್ಟ್ರಿಯಲ್ ಏರಿಯಾ, ಗ್ರೀನ್ ಬೆಲ್ಟ್ ಏರಿಯಾ, ಏಷನ್ ಸ್ಪೇಸ್, ಪಾರ್ಕುಗಳಿರಬೇಕು ಎನ್ನುವಂಥ ಪ್ಲಾನನ್ನು ಅಪ್ರೂವ್ ಮಾಡಿ ಕಳುಹಿಸಿರುತ್ತಾರೆ. ಅದನ್ನು ಅಪ್ರೂವ್ ಮಾಡಿದ ಮೇಲೆ ಪ್ಲಾನಿಂಗ್ ಡಿಪಾರ್ಟ್‌ಮೆಂಟಿಗೆ ಬಂದು, ಪ್ಲಾನಿಂಗ್ ಡಿಪಾರ್ಟ್‌ಮೆಂಟಿನಲ್ಲಿ ಅದನ್ನು ಅಪ್ರೂವ್ ಮಾಡಿ ಅದನ್ನು ಹಿಂದಕ್ಕೆ ಕಳುಹಿಸುತ್ತಾರೆ. ನಕಾಶೆಯನ್ನು ಮಾಡುವ ವಿಚಾರದಲ್ಲಿ ಗ್ರಾಮೀಣ ಪ್ರದೇಶದಲ್ಲಿ ತೊಂದರೆಯಾಗುತ್ತದೆ ಎನ್ನುವ ವಿಚಾರವನ್ನು ಎತ್ತಿದ್ದೀರಿ. ಅವರ ಸಲಹೆಯನ್ನು ನೇರವಾಗಿ ಒಪ್ಪದೇ ಹೋದರೂ ಕೂಡ, ಅವರು ಎತ್ತಿರತಕ್ಕಂಥ ಕೆಲವು ವಿಚಾರಗಳ ಬಗ್ಗೆ ಸರ್ಕಾರದ ವತಿಯಿಂದ ವಿಚಾರ ಮಾಡಿ, ಇದರಲ್ಲಿ ಗ್ರಾಮೀಣ ಪ್ರದೇಶಕ್ಕೆ ಸಂಬಂಧಪಟ್ಟಹಾಗೆ ಏನಾದರೂ ಬದಲಾವಣೆಯನ್ನು ಮಾಡಲು ಸಾಧ್ಯವೇ ಎನ್ನುವ ಬಗ್ಗೆ ಸಾಧ್ಯ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

(ಈ) ಕರ್ನಾಟಕದ ಪೊಲೀಸಸಲ್ ಕಾಲೇಜುಗಳಲ್ಲಿ ಗ್ರಾಮಾಂತರ ವಿದ್ಯಾರ್ಥಿಗಳಿಗೆ ಆಗುತ್ತಿರುವ ಅನ್ಯಾಯದ ಬಗ್ಗೆ

ಶ್ರೀ ವೈಜನಾಥ ಪಾಟೀಲ್ (ಚಿಂಚೋಳಿ): ಮಾನ್ಯ ಅಧ್ಯಕ್ಷರೇ, ಕಳೆದ ಕೆಲವು ವರ್ಷಗಳಿಂದ ಮೆಡಿಕಲ್, ಇಂಜಿನಿಯರಿಂಗ್ ಕೆಲವು ಪ್ರೊಫೆಷನಲ್ ಕೋರ್ಸುಗಳಿಗೆ ನೋಟಿಫಿಕೇಷನ್ ಹೊರಡಿಸುತ್ತಿದ್ದಾರೆ. ಆ ನೋಟಿಫಿಕೇಷನ್‌ನಲ್ಲಿ ಹಳ್ಳಿಗಳಿಗೆ ಸುಮಾರು ಶೇ.15ರಷ್ಟು ರಿಸರ್ವೇಷನ್ ಕೊಟ್ಟಿದ್ದಾರೆ. ಉಳಿದ ಶೇ.85ರಷ್ಟು ಓಪನ್ ಸೀಟುಗಳಾಗಿರಬೇಕಿತ್ತು. ಅವುಗಳನ್ನು ಮೆರಿಟ್ ಮೇಲೆ ಹಳ್ಳಿಯವರು ಬರಲಿ ಅಥವಾ

ಬೇರೆಯವರು ಬರಲಿ, ಆ ಮೆರಿಟ್‌ನವರಿಗೆ ಸಿಗಬೇಕಾಗಿತ್ತು. ಆದರೆ ಆ ಶೇ.85ರಷ್ಟು ಸೀಟುಗಳು ನಗರ ಪ್ರದೇಶಗಳವರಿಗೆ ಮೀಸಲಾಗಿದೆ. ಕಾಲೇಜ್‌ವೈಸ್ ನೋಟಿಫಿಕೇಷನ್‌ಗಳಿವೆ. ಇದರ ಬಗ್ಗೆ ಯಾವುದೇ ರೂಲ್ ಇಲ್ಲ, ಆ್ಯಕ್ಟ್ ಇಲ್ಲ, ನೋಟಿಫಿಕೇಷನ್ ಇಲ್ಲ, ವಿಧಾನಮಂಡಲದ ಕಾರ್ಯಾಲಯಕ್ಕೂ ಇದರ ಬಗ್ಗೆ ಯಾವುದೇ ತಿಳುವಳಿಕೆ ಇಲ್ಲ. ಇಂಥ ಒಂದು ನೋಟಿಫಿಕೇಷನ್‌ಅನ್ನು ಹೊರಡಿಸಿ ಕಾಲೇಜ್‌ವೈಸ್ ಕೊಟ್ಟಿದ್ದಾರೆ. ಬೆಂಗಳೂರು ಮೆಡಿಕಲ್ ಕಾಲೇಜಿನಲ್ಲಿರುವ ಒಟ್ಟು ಸೀಟುಗಳು 150. ಫ್ರೀ ಸೀಟುಗಳು 150. ಅಲ್ ಇಂಡಿಯಾ ಕೋಟಾ 22, ಮಾಜಿ ಸೈನಿಕರಿಗೆ 1, ಪೊಲಿಟಿಕಲ್ ಸಫರರ್‌ಸ್ 1, ಎನ್.ಸಿ.ಸಿ. 1, ಫಿಸಿಕಲಿ ಹ್ಯಾಂಡಿಕ್ಯಾಪ್ಡ್ 4, ಅರ್ಬನ್ 99, ರೂರಲ್ 17. ಇದೇ ರೀತಿ ಮೈಸೂರು ಮೆಡಿಕಲ್ ಕಾಲೇಜಿನಲ್ಲಿ ಅರ್ಬನ್ 65, ರೂರಲ್ 11, ಅದೇ ರೀತಿ ಕರ್ನಾಟಕ ಇನ್‌ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸ್, ಹುಬ್ಬಳ್ಳಿಯಲ್ಲಿ ಅರ್ಬನ್ 34, ರೂರಲ್ 6, ಬಳ್ಳಾರಿ ಮೆಡಿಕಲ್ ಕಾಲೇಜಿನಲ್ಲಿ ಅರ್ಬನ್ 70, ರೂರಲ್ 12, ದಾವಣಗೆರೆ ಮೆಡಿಕಲ್ ಕಾಲೇಜಿನಲ್ಲಿ ಅರ್ಬನ್ 61, ರೂರಲ್ 11 ಸೀಟುಗಳನ್ನು ಕೊಟ್ಟಿದ್ದಾರೆ. ಇದೇ ಪ್ರಕಾರವಾಗಿ ಪ್ರತಿಯೊಂದು ಕಾಲೇಜಿಗೆ ಸೀಟು ಹಂಚಿಕೆ ಮಾಡಿದ್ದಾರೆ. ತಾವೂ ಕೂಡ ಗ್ರಾಮಾಂತರ ಪ್ರದೇಶದಿಂದ ಬಂದಿರತಕ್ಕಂಥವರು. ಆ ದೃಷ್ಟಿಯಿಂದ ಹೇಳುತ್ತಿದ್ದೇನೆ, ಕರ್ನಾಟಕದಲ್ಲಿರುವ ಪ್ರೊಫೆಷನ್ ಕಾಲೇಜುಗಳಲ್ಲಿ ಹಳ್ಳಿಗಳಿಗೆ ಅನ್ಯಾಯವಾಗುತ್ತಿದೆ. ಇದಕ್ಕೆ ಯಾವುದೇ ರೀತಿಯ ರೂಲ್ಸ್ ಇಲ್ಲ. ಕಳೆದ ಸಲ ಮಾನ್ಯ ಪ್ರಕಾಶ್‌ರವರ ಕಛೇರಿಯಲ್ಲಿ ಸಭೆ ಕರೆದಿದ್ದಾಗ ಆ ಸಭೆಗೆ ಮುಖ್ಯ ಕಾರ್ಯದರ್ಶಿಯವರು ಬಂದಿದ್ದರು, ಮುಖ್ಯ ಮಂತ್ರಿಯವರ ಪ್ರಧಾನ ಕಾರ್ಯದರ್ಶಿಯವರೂ ಬಂದಿದ್ದರು, ಆ ಸಭೆಯಲ್ಲಿ ಅದು ಮಿಸ್‌ಪ್ರಿಂಟ್ ಆಗಿರಬೇಕು, ಉಳಿದದ್ದು ಓಪನ್: ಜನರಲ್ ಎಂದಿರಬೇಕು, ಮಿಸ್‌ಪ್ರಿಂಟ್ ಆಗಿರಬಹುದು ಎಂದು ಹೇಳಿದರು. ಆದರೆ ಈ ವರ್ಷವೂ ಅದೇ ರೀತಿಯಾಗಿದೆ. ಅಡ್ಮಿಷನ್ ಕೂಡ ಅದೇ ರೀತಿ ನಡೆಯುತ್ತಿದೆ. ಈ ರೀತಿಯಲ್ಲಿ ನೂರಾರು ಕೋಟಿ ರೂಪಾಯಿಗಳ ವ್ಯವಹಾರ ನಡೆಯುತ್ತಿದೆ. ಆದ್ದರಿಂದ ಇದು ಯಾವ ರೀತಿಯಾಗಿದೆ? ಏಕಾಗಿದೆ? ಇದರಲ್ಲಿ ಯಾರು ಇನ್‌ವಾಲ್ವ್ ಆಗಿದ್ದಾರೆ ಎನ್ನುವ ಬಗ್ಗೆ ಸಿ.ಬಿ.ಐ. ಅಥವಾ ಬೇರೆ ಯಾವುದಾದರೂ ಒಂದು ಏಜೆನ್ಸಿಯಿಂದ ತನಿಖೆಯಾಗಬೇಕು ಎಂದು ನಾನು ತಮ್ಮ ಮುಖಾಂತರ ಸರ್ಕಾರವನ್ನು ಕೇಳುತ್ತಿದ್ದೇನೆ.

ಡಾ: ಎಂ.ಶಂಕರನಾಯಕ್ (ವೈದ್ಯಕೀಯ ಶಿಕ್ಷಣ ಸಚಿವರು): ಮಾನ್ಯ ಅಧ್ಯಕ್ಷರೇ, ಶೇ. 15 ರಷ್ಟು ಸೀಟುಗಳನ್ನು ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗೆ ಕೊಡಬೇಕು ಎಂದು ಸರ್ಕಾರ ನಿಯಮಾವಳಿಗಳನ್ನು ಮಾಡಿದೆ. ಅದರ ಪ್ರಕಾರ 10,000 ಜನಸಂಖ್ಯೆಗಿಂತ ಕಡಿಮೆ ಇರತಕ್ಕಂಥ ಗ್ರಾಮಾಂತರ ಪ್ರದೇಶಗಳಲ್ಲಿ 10 ವರ್ಷ ಓದಿದಂಥ ವಿದ್ಯಾರ್ಥಿಗಳಿಗೆ ಶೇ. 15ರಷ್ಟು ಇಂಜಿನಿಯರಿಂಗ್ ಮತ್ತು ಮೆಡಿಕಲ್ಸ್ ಸೀಟುಗಳನ್ನು ಕೊಡಬೇಕು ಎಂದು ಮಾಡಿದ್ದೇವೆ. ಅದೇ ಪ್ರಕಾರ ಹಂಚಿಕೆ ಸಹ ಆಗಿದೆ.

ಅಂದರೆ ಮಿನಿಮಂ ಶೇ. 15ರಷ್ಟು, ಶೇ. 15ಕ್ಕಿಂತ ಹೆಚ್ಚಿನ ಸೀಟುಗಳನ್ನು ಕೊಡಬಾರದು ಎಂದೇನೂ ಇಲ್ಲ. ಶೇ. 15ರಷ್ಟು ಸೀಟುಗಳನ್ನು ಕೊಟ್ಟ ನಂತರ ಮೆರಿಟ್ ಇರುವಂಥ ಬಾಕಿಯವರು ಜನರಲ್ ಕಾಂಪಿಟೇಷನ್‌ನಲ್ಲಿ ಬರುತ್ತಾರೆ. ಅರ್ಬನ್ ಮತ್ತು ರೂರಲ್ ಸೀಟುಗಳು ಎನ್ನುವುದಕ್ಕೆ ಒಂದು ಕಾರಿಜೆಂಡಮ ಇಷ್ಯೂ ಮಾಡಿದ್ದೇವೆ. ಅದರಲ್ಲಿ ಬೈ ಮಿಸ್ಟೇಕ್ ಜನರಲ್ ಎಂದು ಇರುವುದು ಅರ್ಬನ್ ಎಂದು ಆಗಿದೆ. ಶೇ. 15ರಷ್ಟು ರೂರಲ್‌ಗೆ, ಬಾಕಿಯದು ಜನರಲ್. ನಾವು ಗ್ರಾಮಾಂತರ ಪ್ರದೇಶಕ್ಕೆ ಕೊಡಬೇಕಾದಂಥ ಒಟ್ಟು ಫ್ರೀ ಸೀಟುಗಳು 170. ಆದರೆ ನಾವು ಅಲ್ಲಿ ಕೊಟ್ಟಿರತಕ್ಕಂಥಾದ್ದು 263. ಅಂದರೆ, ಕೆಟಗರಿ-1ರಲ್ಲಿ ರೂರಲ್‌ನಲ್ಲಿ 25 ಕೊಡಬೇಕಾಗಿದ್ದರೆ, ಆ 25 ಸೀಟುಗಳನ್ನು ಕೊಟ್ಟು, ಅವರಿಗೆ ಜನರಲ್ ಮೆರಿಟ್‌ನಲ್ಲಿ ಎಕ್ಸ್‌ಟ್ರಾ 34 ಸೀಟುಗಳು ಸಿಕ್ಕಿವೆ. ಗ್ರಾಮಾಂತರ ಪ್ರದೇಶಕ್ಕೆ ಕನಿಷ್ಟವೆಂದರೆ ಶೆ. 15ರಷ್ಟು ಸೀಟುಗಳಾದರೂ ಬರಲೇಬೇಕೆಂದು ಇದನ್ನು ಮಾಡಿದ್ದೇವೆ.

1.00 ಪಿ.ಎಂ

ಇದರ ಪ್ರಕಾರ ನಾವು ಕನಿಷ್ಟ ಶೇಕಡ 15ರಷ್ಟು ಆದರೂ ಗ್ರಾಮಾಂತರ ಪ್ರದೇಶದ ವಿದ್ಯಾರ್ಥಿಗಳಿಗೆ ಸೀಟುಗಳು ಸಿಗಬೇಕು ಎನ್ನುವ ಉದ್ದೇಶದಿಂದ ಇದನ್ನು ಮಾಡಿದ್ದೇವೆ. ಬಾಕಿ ವಿದ್ಯಾರ್ಥಿಗಳು ಜನರಲ್ ಕಾಂಪಿಟಿಷನ್‌ನಲ್ಲಿ ಬರುತ್ತಾರೆ. ಜನರಲ್ ಕಾಂಪಿಟಿಷನ್‌ನಲ್ಲಿ ಗ್ರಾಮಾಂತರ ಪ್ರದೇಶದ ವಿದ್ಯಾರ್ಥಿಗಳಿಗೆ ಹೆಚ್ಚು ಅಂಕಗಳು ಬಂದಿದ್ದರೆ ಅದರಲ್ಲಿ ಕೂಡ ಸೆಲೆಕ್ಟ್ ಆಗಿ ಬರುತ್ತಾರೆ. ಆದರೆ ಕೊಟ್ಟಿರತಕ್ಕಂಥ ಪಟ್ಟಿಯಲ್ಲಿ ಮಿಸ್‌ಪ್ರಿಂಟ್ ಆಗಿರತಕ್ಕಂಥದ್ದರ ಬಗ್ಗೆ ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ನಾವು ಅದನ್ನು ಸರಿಪಡಿಸುವುದಕ್ಕೆ ಕಾರಿಜೆಂಡಮ್ ಇಶ್ಯೂ ಮಾಡುತ್ತಿದ್ದೇವೆ.

ಶ್ರೀ ವೈಜನಾಥ ಪಾಟೀಲ್: ಮಾನ್ಯ ಅಧ್ಯಕ್ಷರೆ, ಬಹುಶಃ ಮೆಡಿಕಲ್ ಸೀಟುಗಳನ್ನು ಮಾರಿಕೊಳ್ಳುವುದಕ್ಕೆ ಈ ಟೆಕ್ನಿಕ್ ಅನ್ನು ಹುಡುಕಿದ್ದೀರಿ. ಈ ವರ್ಷ ಮಿಸ್‌ಪ್ರಿಂಟ್ ಆಗಿದೆ ಎಂದು ಹೇಳುತ್ತಾರೆ. ಆದರೆ ಕಳೆದ ವರ್ಷ ಕೂಡ ಮಿಸ್‌ಪ್ರಿಂಟ್ ಆಗಿತ್ತೇ? ಆಗಿದ್ದರೆ ಏಕೆ ಸರಿಪಡಿಸಲಿಲ್ಲ? ಏಕೆಂದರೆ ಕಳೆದ ವರ್ಷ ಒಟ್ಟು ಮೆಡಿಕಲ್ ಫ್ರೀ ಸೀಟುಗಳು 1051 ಇದ್ದು, ಅದರಲ್ಲಿ ರೂರಲ್‌ಗೆ 155 ಮತ್ತು ಅರ್ಬನ್‌ಗೆ 896 ಸೀಟುಗಳನ್ನು ಕೊಟ್ಟಿದ್ದಾರೆ. ಕಾಲೇಜುಗಳಿಗೆ ಅಡ್ಮಿಷನ್ ಕೂಡ ಅದೇ ಪ್ರಕಾರ ಆಗಿದೆ. ಮೆಡಿಕಲ್ ಸೀಟುಗಳ ಹಂಚಿಕೆ ಬಗ್ಗೆ ನೋಟಿಫಿಕೇಷನ್ ಯಾವ ರೀತಿ ಆಗಿದೆ? ಅಡ್ಮಿಷನ್ ಯಾವ ನಿಯಮದ ಮೇಲೆ ಆಗಿದೆ, ಇತ್ಯಾದಿಗಳ ಬಗ್ಗೆ ನಾನು ಮತ್ತು ಗುರುನಾಥ್‌ರವರು ಇಬ್ಬರೂ ಮುಖ್ಯಕಾರ್ಯದರ್ಶಿಯವರ ಕಛೇರಿಗೆ ಹೋಗಿ ಪತ್ರ ಕೊಟ್ಟಿದ್ದೆವು. ಈಗಾಗಲೇ 2-3 ತಿಂಗಳು ಕಳೆದಿದೆ. ಕೊನೆಯಪಕ್ಷ ಸೌಜನ್ಯಕ್ಕಾದರೂ ಮುಖ್ಯಕಾರ್ಯದರ್ಶಿಯವರು ನಮಗೆ ಪತ್ರ ಬರೆದು ವಿವರಣೆ ನೀಡಬೇಕಿತ್ತು. ಆದರೆ ಇಲ್ಲಿಯವರೆಗೆ ಅವರ ಕಡೆಯಿಂದ ಉತ್ತರ ಬಂದಿಲ್ಲ. ರೂರಲ್ ವಿದ್ಯಾರ್ಥಿಗಳಿಗೆ

ಮತ್ತು ಅರ್ಬನ್ ವಿದ್ಯಾರ್ಥಿಗಳ ಮಧ್ಯೆ ಇಷ್ಟೊಂದು ತಾರತಮ್ಯ ಏಕೆ ಮಾಡುತ್ತೀರಿ? ಗ್ರಾಮಾಂತರ ಪ್ರದೇಶದ ವಿದ್ಯಾರ್ಥಿಗಳಿಗೆ ಏಕೆ ಅನ್ಯಾಯ ಮಾಡುತ್ತೀರಿ?

ಡಾ: ಎಂ.ಶಂಕರನಾಯಕ್: ಮಾನ್ಯ ಅಧ್ಯಕ್ಷರೆ, ವೈದ್ಯಕೀಯ ಸೀಟುಗಳನ್ನು ಹಂಚುವಲ್ಲಿ ಎಲ್ಲೂ ಅನ್ಯಾಯವಾಗಿಲ್ಲ. 1997ರಲ್ಲಿ ಒಟ್ಟು 170 ಸೀಟುಗಳನ್ನು ಗ್ರಾಮಾಂತರ ಪ್ರದೇಶದ ವಿದ್ಯಾರ್ಥಿಗಳಿಗೆ ಕೊಡಬೇಕಾಗಿತ್ತು. ಆದರೆ 93 ಸೀಟುಗಳು ಹೆಚ್ಚಿಗೆ ಅವರಿಗೆ ದೊರಕಿ ಒಟ್ಟು 263 ಸೀಟುಗಳನ್ನು ಕೊಡಲಾಗಿದೆ. 1998ರಲ್ಲಿ ಗ್ರಾಮಾಂತರ ಪ್ರದೇಶದವರಿಗೆ 159 ಮೆಡಿಕಲ್ ಸೀಟುಗಳು ಸಿಗಬೇಕಾಗಿತ್ತು, ಆದರೆ 109 ಸೀಟುಗಳು ಹೆಚ್ಚಿಗೆ ದೊರಕಿ ಒಟ್ಟು 268 ಸೀಟುಗಳು ಸಿಕ್ಕಿವೆ. ಅಂದರೆ 15 ಪರ್ಸಂಟ್‌ಗಿಂತ ಹೆಚ್ಚಿಗೆ ಸೀಟುಗಳು ಸಿಕ್ಕಿವೆ. ಆದ್ದರಿಂದ ಗ್ರಾಮಾಂತರ ಪ್ರದೇಶದ ವಿದ್ಯಾರ್ಥಿಗಳಿಗೆ ಸೀಟುಗಳ ಹಂಚಿಕೆಯಲ್ಲಿ ಅನ್ಯಾಯವಾಗಿಲ್ಲ ಎಂದು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ತಿಳಿಸಬಯಸುತ್ತೇನೆ.

ಶ್ರೀ ವೈಜನಾಥ ಪಾಟೀಲ್: ಮಾನ್ಯ ಅಧ್ಯಕ್ಷರೆ, ಪಟ್ಟಣ ಪ್ರದೇಶದ ಅಭ್ಯರ್ಥಿಗಳಿಗೆ ಎಷ್ಟು ಮೆಡಿಕಲ್ ಸೀಟುಗಳು ದೊರಕಿವೆ ಎಂಬುದನ್ನು ಹೇಳಬೇಕು. ಅರ್ಬನ್‌ಗೆ ಎಷ್ಟು ಸೀಟುಗಳು ಮತ್ತು ರೂರಲ್‌ಗೆ ಎಷ್ಟು ಮೆಡಿಕಲ್ ಸೀಟುಗಳನ್ನು ಕೊಡಲಾಗಿದೆ ಎನ್ನುವ ಪಟ್ಟಿ ನನ್ನ ಹತ್ತಿರ ಇದೆ.

ಡಾ: ಎಂ.ಶಂಕರನಾಯಕ್: ಮಾನ್ಯ ಅಧ್ಯಕ್ಷರೆ, ಪಟ್ಟಣ ಪ್ರದೇಶದವರಿಗೆ ಮೆಡಿಕಲ್ ಸೀಟುಗಳು ಎಂದು ಪ್ರತ್ಯೇಕವಾಗಿ ಬರುವುದಿಲ್ಲ. ಅರ್ಬನ್ ಎನ್ನುವುದು ತಪ್ಪಾಗಿ ಪ್ರಿಂಟ್ ಆಗಿದೆ, ಆ ಜಾಗದಲ್ಲಿ ಜನರಲ್ ಮೆರಿಟ್ ಎಂದು ಬರಬೇಕೆಂದು ನಾನು ಆಗಲೇ ಹೇಳಿದ್ದೇನೆ.

ಅಧ್ಯಕ್ಷರು: 'ಜನರಲ್' ಎಂದು ಪ್ರಿಂಟ್ ಆಗಬೇಕಾದ ಜಾಗದಲ್ಲಿ ತಪ್ಪಾಗಿ 'ಅರ್ಬನ್' ಎಂದು ಪ್ರಿಂಟ್ ಆಗಿದೆ, ಅದನ್ನು ಸರಿಪಡಿಸುವುದಕ್ಕೆ ಕಾರಿಜೆಂಡಮ್ ಇಶ್ಯೂ ಮಾಡಿದ್ದೇವೆಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ.

ಶ್ರೀ ವೈಜನಾಥ ಪಾಟೀಲ್: ಮಾನ್ಯ ಅಧ್ಯಕ್ಷರೆ, ಅರ್ಬನ್ ಎಂದು ಮಿಸ್‌ಪ್ರಿಂಟ್ ಆಗಿರುವುದು ಅಲ್ಲ. ಇವರೇ ಬೇಕು ಎಂದು ಮಾಡಿದ್ದಾರೆ. ಇದು 2-3 ವರ್ಷಗಳಿಂದ ನಡೆಯುತ್ತಿದೆ. ಇದರ ಬಗ್ಗೆ ಮುಖ್ಯ ಕಾರ್ಯದರ್ಶಿಯವರ ಜೊತೆ ಮೀಟಿಂಗ್ ಆದಮೇಲೆ ಕೂಡ ಪುನಃ ಇದೇ ತರಹ ಆಗಿದೆ. ಆದ್ದರಿಂದ ಅರ್ಬನ್ ಮತ್ತು ರೂರಲ್‌ಗೆ ಯಾವ ಪ್ರಕಾರ ಮೆಡಿಕಲ್ ಸೀಟುಗಳನ್ನು ಕೊಟ್ಟಿದ್ದಾರೆ, ರಿಸರ್ವೇಷನ್ ಪಾಲಿಸಿಯನ್ನು ಯಾವ ತರಹ ಪಾಲಿಸಿದ್ದಾರೆ ಇತ್ಯಾದಿಯನ್ನು ಪರಿಶೀಲಿಸಿ 15 ದಿವಸದ ಒಳಗೆ ವರದಿ ಕೊಡುವಂತೆ ಈ ವಿಷಯವನ್ನು ಕರ್ನಾಟಕ ವಿಧಾನಮಂಡಲದ 'ಅಧೀನ ಶಾಸನ ರಚನಾ ಸಮಿತಿಗೆ' ವಹಿಸಬೇಕೆಂದು ನಾನು ಮಾನ್ಯ ಅಧ್ಯಕ್ಷರಲ್ಲಿ

ವಿನಮ್ರತೆಯಿಂದ ಪ್ರಾರ್ಥಿಸಿಕೊಳ್ಳುತ್ತೇನೆ. ನನ್ನ ಹತ್ತಿರ ಇರುವ ಪಟ್ಟಿಯನ್ನು ತಮಗೆ ಕಳುಹಿಸಿಕೊಡುತ್ತೇನೆ.

ಅಧ್ಯಕ್ಷರು: ಆಯಿತು, ಪಟ್ಟಿಯನ್ನು ಕಳುಹಿಸಿಕೊಡಿ, ನಾನು 'ಅಧೀನ ಶಾಸನಾ ರಚನಾ ಸಮಿತಿಗೆ ರೆಫರ್ ಮಾಡುತ್ತೇನೆ.

ಶ್ರೀ ಡಿ.ಆರ್.ಪಾಟೀಲ್: ಮಾನ್ಯ ಅಧ್ಯಕ್ಷರೆ, ಗ್ರಾಮಾಂತರ ಪ್ರದೇಶದಲ್ಲಿ ಓದಿದ ವಿದ್ಯಾರ್ಥಿಗಳಿಗೆ 15 ಪರ್ಸಂಟ್ ಕೃಪಾಂಕ ಕೊಟ್ಟು ಮೆಡಿಕಲ್, ಇಂಜಿನಿಯರ್ ವಿಭಾಗದಲ್ಲಿ ಅವರಿಗೆ ಹೆಚ್ಚಿನ ರೆಪ್ರಸಂಟೇಷನ್ ಕೊಡಬೇಕೆನ್ನುವುದು ಸರ್ಕಾರದ ಉದ್ದೇಶ ಇತ್ತು. ಆದಕ್ಕೆ ಯಾರೋ ಕೋರ್ಟಿಗೆ ಹೋದರೆಂದು 15 ಪರ್ಸಂಟ್ ಸೀಟುಗಳನ್ನು ಹಳ್ಳಿಯಲ್ಲಿ ಓದಿದ ವಿದ್ಯಾರ್ಥಿಗಳಿಗೆ ರಿಸರ್ವ್ ಮಾಡಿದಿರಿ. ಗ್ರಾಮಾಂತರ ಪ್ರದೇಶ ಎಂದರೆ ಅದನ್ನು 50ಸಾವಿರ ಜನಸಂಖ್ಯೆ ಇದ್ದರೂ ಕೂಡ ಗ್ರಾಮಾಂತರ ಪ್ರದೇಶ ಎಂದು ಹೇಳುತ್ತೀರಿ. ಆದ್ದರಿಂದ 50 ಸಾವಿರ ಜನಸಂಖ್ಯೆ ಇರುವಂಥ ಪಟ್ಟಣ ಪ್ರದೇಶ ಮತ್ತು 50 ಸಾವಿರ ಜನಸಂಖ್ಯೆ ಇರುವಂಥ ಗ್ರಾಮಾಂತರ ಪ್ರದೇಶ ಈ ಎರಡೂ ಕಡೆಯಿಂದ ಸೇರಿ ಪಿ.ಯು.ಸಿ.ಗೆ ಆಪಿಯರ್ ಆಗುವಂಥ ಸಂದರ್ಭದಲ್ಲಿ ಒಟ್ಟು ಮೆಡಿಕಲ್ ಸೀಟುಗಳು ಎಷ್ಟು? ಅದರ ಪ್ರಮಾಣದ ಮೇಲೆ ಗ್ರಾಮಾಂತರ ವಿದ್ಯಾರ್ಥಿಗಳಿಗೆ ಅಡ್ಮಿಷನ್ ಕೊಟ್ಟರೆ ಪರವಾಗಿಲ್ಲ. ಅದರ ಬದಲು ಪಟ್ಟಣ ಪ್ರದೇಶದಲ್ಲಿ ಶೇಕಡ 85ರಷ್ಟು ಸೀಟುಗಳನ್ನು ಇಟ್ಟುಕೊಂಡು 15 ಪರ್ಸಂಟ್‌ನಷ್ಟು ಸೀಟುಗಳನ್ನು ಮಾತ್ರ ಗ್ರಾಮಾಂತರ ಪ್ರದೇಶದವರಿಗೆ ಕೊಟ್ಟು, ಅದರ ಜೊತೆಯಲ್ಲಿ ಇನ್ನು 100 ಸೀಟುಗಳನ್ನು ಹೆಚ್ಚಿಗೆ ಕೊಟ್ಟಿದ್ದೇವೆ ಎಂದು ಹೇಳಿದರೆ ಗ್ರಾಮೀಣ ಪ್ರದೇಶದ ಒಟ್ಟು ಪರ್ಸಂಟೇಜ್ 25ರೊಳಗೆ ಆಗುತ್ತದೆ. 50 ಸಾವಿರದಷ್ಟು ಜನಸಂಖ್ಯೆ ಇರುವ ಗ್ರಾಮಾಂತರ ಪ್ರದೇಶದವರಿಗೆ 15 ಪರ್ಸೆಂಟ್ ಸೀಟುಗಳನ್ನು ರಿಸರ್ವ್ ಮಾಡಿ 50 ಸಾವಿರ ಜನಸಂಖ್ಯೆ ಇರುವ ಪಟ್ಟಣ ಪ್ರದೇಶಕ್ಕೆ 85 ಪರ್ಸೆಂಟ್‌ನಷ್ಟು ಸೀಟುಗಳನ್ನು ರಿಸರ್ವ್ ಮಾಡುವುದು ಇದು ಸರಿಯಾಗುತ್ತದೆಯೇ? ಸರ್ಕಾರದ ಉದ್ದೇಶ ಏನು? ಗ್ರಾಮಾಂತರ ಪ್ರದೇಶದಲ್ಲಿ ವಿದ್ಯಾಭ್ಯಾಸ ಮಾಡಿರತಕ್ಕಂಥ ವಿದ್ಯಾರ್ಥಿಗಳಿಗೆ ಹೆಚ್ಚಿನ ಸೀಟುಗಳನ್ನು ದೊರಕಿಸಿಕೊಡುವುದು ಸರ್ಕಾರದ ಉದ್ದೇಶವೋ ಅಥವಾ ನಗರಪ್ರದೇಶದಲ್ಲಿ ಇರುವವರಿಗೆ ಹೆಚ್ಚು ಸೀಟುಗಳನ್ನು ಕೊಡುವುದು ನಿಮ್ಮ ಉದ್ದೇಶವೋ? ದಯವಿಟ್ಟು ಹೇಳಬೇಕು. ಏಕೆಂದರೆ ಪಟ್ಟಣಗಳಲ್ಲಿ ಒಳ್ಳೆಯ ಕಾಲೇಜುಗಳು ಇದ್ದು ಇಲ್ಲಿನ ವಿದ್ಯಾರ್ಥಿಗಳಿಗೆ ಕಾಂಪಿಟಿಷನ್ ಪರೀಕ್ಷೆಯಲ್ಲಿ ಹೆಚ್ಚಿಗೆ ಅಂಕಗಳು ಬಂದೇ ಬರುತ್ತದೆ.

ಡಾ: ಎಂ.ಶಂಕರ ನಾಯಕ್: ಮಾನ್ಯ ಅಧ್ಯಕ್ಷರೆ, ಪಟ್ಟಣ ಪ್ರದೇಶದ ವಿದ್ಯಾರ್ಥಿಗಳಿಗೆ 75 ಪರ್ಸಂಟ್ ರಿಸರ್ವ್ ಎನ್ನುವ ನಿಯಮ ಇಲ್ಲ. ರೂರಲ್ ವಿದ್ಯಾರ್ಥಿಗಳಿಗೆ 15 ಪರ್ಸಂಟ್ ರಿಸರ್ವ್ ಬಿಟ್ಟು ಬಾಕಿ ಜನರಲ್ ಸೀಟುಗಳು ಆಗಿರುತ್ತವೆ. ಇನ್ನು

ಕೃಪಾಂಕಗಳನ್ನು ಕೊಟ್ಟು ಸೀಟುಗಳನ್ನು ನೀಡವುದರ ಬಗ್ಗೆ ಮಾನ್ಯ ಸದಸ್ಯರು ಹೇಳಿದರು, ಇದರ ಬಗ್ಗೆ ಸರ್ಕಾರ ಹಿಂದೆ ಏನು ಆದೇಶ ನೀಡಿತ್ತು ಅದರ ಪ್ರಕಾರ ಮಾಡುತ್ತಿದ್ದೇವೆ. ಈಗ ಸದರಿ ವಿಚಾರ ಕೋರ್ಟಿನಲ್ಲಿ ಇರುವುದರಿಂದ, ಅಲ್ಲಿ ಡಿಸೈಡ್ ಆಗಿ ಏನು ಆರ್ಡರ್ ಬರುತ್ತದೋ ಅದರಂತೆ ನಾವು ಇಲ್ಲಿ ಜಾರಿ ಮಾಡುತ್ತೇವೆ.

ಶ್ರೀ ವೈಜನಾಥ ಪಾಟೀಲ್: ಮಾನ್ಯ ಅಧ್ಯಕ್ಷರೆ, ನನ್ನ ಹತ್ತಿರ ಇರುವ ಪಟ್ಟಿಯನ್ನು ತಮಗೆ ಕಳುಹಿಸಿಕೊಡುತ್ತಿದ್ದೇನೆ.

ಅಧ್ಯಕ್ಷರು: ನನಗೆ ಕಳುಹಿಸಿಕೊಡಿ.

(ಉ) ದಾವಣಗೆರೆ ಜಿಲ್ಲಾ ಭದ್ರಾ ಸಹಕಾರಿ ಸಕ್ಕರೆ ಕಾರ್ಖಾನೆಯ ಕಾರ್ಮಿಕರನ್ನು ತೆಗೆದುಹಾಕಿರುವ ಬಗ್ಗೆ.

ಶ್ರೀ ಬಿ.ಎಸ್.ಯಡಿಯೂರಪ್ಪ (ಶಿಕಾರಿಪುರ): ಮಾನ್ಯ ಅಧ್ಯಕ್ಷರೆ, ದಾವಣಗೆರೆ ಜಿಲ್ಲಾ ಭದ್ರಾ ಸಹಕಾರಿ ಸಕ್ಕರೆ ಕಾರ್ಖಾನೆಯಲ್ಲಿ 123 ಕಾರ್ಮಿಕರನ್ನು ತೆಗೆದು ಹಾಕಿದ್ದಾರೆ. ಈ ಬಗ್ಗೆ 11-9-1997ರಂದು ಈ ಸದನದಲ್ಲಿ ಮತ್ತು ವಿಧಾನಪರಿಷತ್ತಿನಲ್ಲಿ ಚರ್ಚೆ ಆಯಿತು. ಆ ಸಂದರ್ಭದಲ್ಲಿ 'ಮಾತುಕತೆ ನಡೆಸಿ ಇದನ್ನು ಬಗೆಹರಿಸಿಕೊಳ್ಳಿ' ಎಂದು ಮಾನ್ಯ ಅಧ್ಯಕ್ಷರಾದ ತಾವೇ ಅಂದು ಸಲಹೆ ಕೊಟ್ಟಿದ್ದೀರಿ. ಈಗ ಸನ್ಮಾನ್ಯ ಶಿವಪ್ಪನವರು ದೇವರ ದಯೆಯಿಂದ ಕ್ಯಾಬಿನೆಟ್ ಸಚಿವರಾಗಿದ್ದಾರೆ. ಅಂದಿನ ಮಾತುಕತೆ ಸಮಯದಲ್ಲಿ ಮಾನ್ಯ ಸಕ್ಕರೆ ಸಚಿವರು, ಮಾನ್ಯ ಹೆಚ್.ಶಿವಪ್ಪನವರು ಮತ್ತು ಕಾರ್ಮಿಕ ಇಲಾಖೆಯ ಪ್ರಮುಖರ ಜೊತೆ ಮಾತನಾಡಿದಾಗ - 53 ಕಾರ್ಮಿಕರ ಕೆಲಸ ನಿರಾಕರಣೆ ಬಗ್ಗೆ ಸದರಿಯವರುಗಳು ಕಾರ್ಮಿಕ ನ್ಯಾಯಾಲಯದಲ್ಲಿ ದಾವೆ ಹೂಡಿದ್ದು, ಇವರುಗಳಿಗೆ ತೊಂದರೆಯಾಗುತ್ತಿರುವುದರಿಂದ ವಾಪಸ್ಸು ಕೆಲಸಕ್ಕೆ ತೆಗೆದುಕೊಳ್ಳಬೇಕೆಂದು ಹೇಳಿದಾಗ, ಕೇಸುಗಳನ್ನು ವಾಪಸ್ಸು ತೆಗೆದುಕೊಂಡರೆ ಅವರುಗಳನ್ನು ಕೆಲಸಕ್ಕೆ ತೆಗೆದುಕೊಳ್ಳಲಾಗುವುದು ಎಂದು ಒಪ್ಪಿಕೊಂಡರು. ಅದರಂತೆ ಆ 53 ಜನರು ಕೇಸುಗಳನ್ನು ವಾಪಸ್ಸು ತೆಗೆದುಕೊಂಡಿದ್ದಾರೆ. ಹಾಗೆಯೇ ಅವರಿಗೆ ಸಂಬಳಸಾರಿಗೆ ಇತ್ಯಾದಿ ಕೊಡಬೇಕೆಂದು ಒಪ್ಪಂದ ಆಗಿದೆ. ಈಗ ಅಲ್ಲಿ ಗೊಂದಲ ಏನು ಮಾಡಿದ್ದಾರೆ, ಕಾರ್ಮಿಕರು ಕೇಸುಗಳನ್ನು ವಾಪಸ್ಸು ತೆಗೆದುಕೊಂಡಿದ್ದಾರೆ, ಈಗ ನಾನು ಕೇಳಿಕೊಳ್ಳುವುದೇನೆಂದರೆ ತಾವು ಸಲಹೆ ಕೊಟ್ಟಂತೆ ನಾವು ಮತ್ತು ಮಾನ್ಯ ಸಕ್ಕರೆ ಸಚಿವರು ಹಾಗೂ ಶ್ರೀ ಶಿವಪ್ಪನವರು ಒಪ್ಪಿಕೊಂಡಂತೆ ಈ 53 ಕಾರ್ಮಿಕರನ್ನು ನೌಕರಿಗೆ ವಾಪಸ್ಸು ತೆಗೆದುಕೊಂಡು ಅವರಿಗೆ ಸಿಗಬೇಕಾದಂಥ ಸಂಬಳಸಾರಿಗೆ ಕೊಟ್ಟು ಅವರಿಗೆ ನ್ಯಾಯ ಒದಗಿಸಿಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.....

ಶ್ರೀ ಉಮೇಶ್ ವಿ.ಕತ್ತಿ (ಸಕ್ಕರೆ ಸಚಿವರು): ಮಾನ್ಯ ಅಧ್ಯಕ್ಷರೆ, ದಾವಣಗೆರೆ